# ಆಹಾ ಸುದ್ದಿ!

★ ಸಸಿತೋಟ

ಔರಂಗಾಬಾದಿನಲ್ಲಿ ವಿಶೇಷ ರೀತಿಯ ಪಾನ್ ಬೀಡಾ ಲಭ್ಯವಂತೆ. ಆದರೆ ಅದನ್ನು ಸವಿಯಲು ಟಿ/ಸಿ ಅಪ್ಲೈ. ಈ ಷರತ್ತು ಏನಪ್ಪಾ ಅಂದ್ರೆ ನೀವು ವಿವಾಹಿತರಾಗಿರಬೇಕು. ಈ ವಿಶೇಷ ಕೊಹಿನೂರ್ ಪಾನ್ ಬೆಲೆ ಬರೋಬ್ಬರಿ 5 ಸಾವಿರ ರೂಪಾಯಿ. ಪುರುಷ ಹಾಗೂ ಮಹಿಳೆಗೆ ಪ್ರತ್ಯೇಕ್ ಪಾನ್. ತಿನ್ನುವ ಬಯಕೆ ಇದ್ದವರು ಮದುವೆ ಸರ್ಟಿಫಿಕೇಟ್ ಹಿಡಿದುಕೊಂಡು ಕ್ಯೂ ನಿಲ್ಲಬಹುದು.



ಈತ ಆಸ್ಟ್ರೇಲಿಯಾದ ಕಲಾವಿದ ಮೈಕ್ ಪಾರ್. ಅಲ್ಲಿ ನಡೆದ 'ಕಪ್ಪು ಕಲೆ' ಪ್ರದರ್ಶನದಲ್ಲಿ ಈತ ರಸ್ತೆಯ ಕೆಳಗೆ ಪೆಟ್ಟಿಗೆಯಲ್ಲಿ ಆಹಾರ ಸೇವಿಸದೆ ಮೂರು ದಿನ ಇದ್ದನಂತೆ. ಇದು ಪ್ರದರ್ಶನದ ಒಂದು ಭಾಗ ಎಂದು ಆತ ಹೇಳಿಕೊಂಡಿದ್ದರೆ, ಪೊಲೀಸರು ಮತ್ತು ಅಧಿಕಾರಿಗಳು ತಮ್ಮ ಕರ್ತವ್ಯದ ಭಾಗ ಎಂದು ಆತನನ್ನು ಹೊರಗೆ ಎಳೆದು ಹಾಕಿದರಂತೆ.



ಫ್ರಾನ್ಸ್‌ನಲ್ಲಿ ಮಹಾ ಕ್ರಾಂತಿ ಶುರುವಾಗಿದೆ. ಅದು 'ಬೆತ್ತಲೆ ಕ್ರಾಂತಿ'. ಎಲ್ಲವೂ ನೈಸರ್ಗಿಕ ಎಂಬ ಹೆಸರಲ್ಲಿ ಜನ ನಗ್ನರಾಗಿ ಯೋಗ ಶುರು ಮಾಡಿಕೊಂಡಿದ್ದಾರೆ. ಕಳೆದ ವಾರ ಒಂದಿಷ್ಟು ಮಂದಿ ಉಡುಪನ್ನು ಕಿತ್ತೆಸೆದು ವಸ್ತು ಸಂಗ್ರಹಾಲಯ ವೀಕ್ಷಿಸಿದರಂತೆ. ಇನ್ನೊಂದಿಷ್ಟು ಮಂದಿ ಉದ್ಯಾನದಲ್ಲಿ ಇದೇ ರೀತಿ ಸುತ್ತಾಡಿದರಂತೆ. ಬಟ್ಟೆಯ ಅಲರ್ಜಿ ಇನ್ನೂ ಕಚೇರಿಯವರೆಗೆ ಹಬ್ಬಿದ ಹಾಗಿಲ್ಲ.

ಅಮೆರಿಕದ ಡೋವರ್‌ನಲ್ಲಿ ರಸ್ತೆಯ ಮೇಲೆ ಯಾರೋ ಮನೆಯನ್ನೇ ಬಿಟ್ಟು ಹೋಗಿದ್ದರಂತೆ. ಈ ಮೊಬೈಲ್ ಮನೆಯಿಂದಾಗಿ ಬೆಳಿಗ್ಗೆ ವಾಹನ ಸವಾರರು ಪರದಾಡಿದರೆ, ಪೊಲೀಸರು ರಸ್ತೆ ತೆರವು ಮಾಡಲು ಹರಸಾಹಸ ಪಟ್ಟರಂತೆ. ಬೆಂಗಳೂರಿನಲ್ಲಿ ಬೆಳಿಗ್ಗೆ ಎದ್ದು ನೋಡಿದರೆ ರಸ್ತೆಯ ಮೇಲೆ ಸಾಕು ನಾಯಿಗಳು ಏನನ್ನೋ ಬಿಟ್ಟು ಹೋಗಿರುತ್ತವೆ, ಅಮೆರಿಕದಲ್ಲಿ ಜನ ಮನೆಯನ್ನೇ ಬಿಟ್ಟು ಹೋಗುತ್ತಾರೆ!



ಶ್ರೀಲಂಕಾದಲ್ಲಿ ಪೊಲೀಸರು ಜೂಜು ಅಡ್ಡೆಯೊಂದರ ಮೇಲೆ ದಾಳಿ ನಡೆಸಿದಾಗ ಎಲ್ಲಾ ಪರಾರಿಯಾದರಂತೆ. ಬರಿಗೈಲಿ ವ್ಯಾನಿನ ಬಳಿ ಬಂದ ಪೊಲೀಸರು ಒಬ್ಬ ಜೂಜುಕೋರ ಮಾತ್ರ ವ್ಯಾನಿನಲ್ಲಿ ಸೀಟು ಹಿಡಿದುಕೊಂಡು ಕೂತಿದ್ದು ಕಂಡು ದಂಗಾದರಂತೆ. ಕಳೆದ ಬಾರಿ ಹೀಗೆಯೇ ಸಿಕ್ಕಿಬಿದ್ದಾಗ ಪೊಲೀಸ್ ವ್ಯಾನಿನಲ್ಲಿ ಕೂರಲು ಜಾಗವಿಲ್ಲದೇ ನಿಂತುಕೊಂಡೇ ಹೋಗಿದ್ದ ಭೂಪ ಈ ಬಾರಿ ತಲೆ ಓಡಿಸಿ ಸೀಟು ರಿಸರ್ವ್ ಮಾಡಿಕೊಂಡಿದ್ದ, ವ್ಯಾನಿನಲ್ಲಿ ಮಾತ್ರವಲ್ಲ, ಜೈಲಿನಲ್ಲೂ!



ಜರ್ಮನಿಯ ಈ ದಂಪತಿಗೆ ವಿಚಿತ್ರ ಖಯಾಲಿ. ಆಕಾಶದಲ್ಲಿ ಮದುವೆಯಾಗುವ ಆಸೆಯನ್ನು ಕೊನೆಗೂ ಈಡೇರಿಸಿಕೊಂಡರಂತೆ. ಎರಡು ಕಟ್ಟಡಗಳ ಮಧ್ಯೆ ಕಟ್ಟಿದ್ದ ಹಗ್ಗದ ಮೇಲೆ ಬೈಕ್ ಓಡಿಸುವಾಗ ಅದಕ್ಕೆ ಜೋತು ಬಿದ್ದ ಉಯ್ಯಾಲೆಯಲ್ಲಿ ಉಂಗುರ ಬದಲಾಯಿಸಿಕೊಂಡರಂತೆ. ಜಾಣ ದಂಪತಿ. ವೈವಾಹಿಕ ಜೀವನ ಹಗ್ಗದ ಮೇಲಿನ ನಡಿಗೆಯಿದ್ದಂತೆ ಎಂದು ವಿಶ್ಲೇಷಿಸುವವರ ಬಾಯಿಗೆ ಬೀಗ ಹಾಕಿ, ಓಲಾಡುವ ಉಯ್ಯಾಲೆಗೆ ಹೋಲಿಸಿಕೊಂಡಿದ್ದಾರೆ.